ಆನ್‌ಲೈನ್‌ನಲ್ಲಿ ಇದ್ದೇನೆ ಎಂಬುದರ ಅರ್ಥ ನಾನು ನಿಮ್ಮೊಂದಿಗೆ ಚಾಟ್ ಮಾಡಲು ಬಯಸುತ್ತೇನೆ ಎಂದಲ್ಲ. ಹೊರದೇಶದಲ್ಲಿರುವ ಸಂಬಂಧಿಕರೊಂದಿಗೆ ನಾನು ಚಾಟ್ ಮಾಡುತ್ತಿದ್ದೇನೆ. ದಯಮಾಡಿ ಅವೇಳೆಯಲ್ಲಿ ಮೆಸೇಜ್‌ಗಳನ್ನು ಕಳುಹಿಸಬೇಡಿ. ಅದ್ಯಾಕೋ ಸರಿ ಕಾಣುವುದಿಲ್ಲ'' ಎಂದು ಮೆಸೇಜಿಸಿ ಆಫ್‌ಲೈನ್ ಮೋಡ್‌ಗೆ ಬಂದುಬಿಟ್ಟಿದ್ದಳು.

ಕೆಲವೊಮ್ಮೆ ಕಾರಣವಿಲ್ಲದೆ ಕ್ಷುಲ್ಲಕ ಸಂಗತಿಗಳೇ ಕಾಡುವಂತೆ ಈ ವಿಕ್ರಮನ ಪ್ರಶ್ನೆ ಪ್ರಣತಿಯನ್ನ ಅಂದು ಹಗಲಿಡೀ ಕಾಡಹತ್ತಿತು. ಇವನ ಪ್ರಕಾರ ಆನ್‌ಲೈನ್‌ಗೆ ಬರುವುದೆಂದರೆ ನಿಜಕ್ಕೂ ಚಾಟ್ ಮಾಡಲು ಬೇರೆಯವರನ್ನ ಆಹ್ವಾನಿಸಿದಂತಾಗುತ್ತದಾ? ಹಾಗಾದರೆ ತನ್ನ ಸಮಯವನ್ನ ತನ್ನಿಷ್ಟದಂತೆ ಕಳೆಯಲು ಇಲ್ಲಿ ಸಾಧ್ಯವಿಲ್ಲವೆ ಎನಿಸಿ ಅಸಾಧ್ಯ ಸಿಟ್ಟು ಬಂದರೂ ಯಾರ್‍ಯಾರು ಆನ್‌ಲೈನಿನಲ್ಲಿ ಇದ್ದಾರೆಂದು ಗಮನಿಸಿ ಬಲವಂತವಾಗಿ ಮಾತಿಗೆಳೆಯುವ ಚಟಕ್ಕೆ ಬಲಿಯಾದ ಯಾವನೋ ಏನೋ ಕೇಳಿದ ಎಂದು ತಾನೇಕೆ ತಲೆ ಕೆಡಿಸಿಕೊಳ್ಳಬೇಕೆಂದು ಭುಜ ಹಾರಿಸಿ ಆ ವಿಷಯ ಮರೆತುಬಿಟ್ಟಳು. ಸಂಜೆ ಸೂರಜ್ ಆಫೀಸಿನಿಂದ ಮನೆಗೆ ಬಂದವನೆ ಕೆಲಸದ ನಿಮಿತ್ತ ಇಂದೇ ಹೈದರಾಬಾದಿಗೆ ಹೋಗುತ್ತಿದ್ದು, ನಾಳಿದ್ದು ಬೆಳಿಗ್ಗೆ ಮತ್ತೆ ಮನೆಯಲ್ಲಿರುವುದಾಗಿ ಹೇಳಿ ಅವಸರವಸರವಾಗಿ ಎರಡು ಜೊತೆ ಬಟ್ಟೆ ಟ್ರಾಲಿಗೆ ತುಂಬಿದವನೆ ಗಡಿಬಿಡಿಯಿಂದ ಹೊರಟ. ಅವನು ಆಗೀಗ ಹೀಗೆ ಕೆಲಸದ ಮೇಲೆ ಹೊರ ಹೋಗುವುದು ಅಭ್ಯಾಸವಾಗಿ ಹೋಗಿತ್ತಾಗಿ ಪ್ರಣತಿ ಬೇಸರವನ್ನೇನೂ ಮಾಡಿಕೊಳ್ಳದೆ ಇಂದು ಅಡಿಗೆ ಮಾಡುವ ಕೆಲಸವೂ ಇಲ್ಲ, ಮಧ್ಯಾಹ್ನ ಉಳಿದದ್ದೇ ರಾತ್ರಿಗೂ ಆಗುತ್ತದೆಂದು ಹಾಗೇ ಪುಸ್ತಕವೊಂದನ್ನು ಕೈಯಲ್ಲಿ ಹಿಡಿದು ಹಾಸಿಗೆಯ ಮೇಲೆ ಅಡ್ಡಾದಳು. ಯಾವ ಮಾಯದಲ್ಲಿ ನಿದ್ದೆ ಹತ್ತಿತೋ ಎಚ್ಚರವಾದಾಗ ಒಂಬತ್ತು ಗಂಟೆ ತೋರಿಸುತ್ತಿತ್ತು. ಪಕ್ಕದಲ್ಲೆ ಇದ್ದ ಮೊಬೈಲ್ ಹತ್ತಾರು ಬಾರಿ ಹೊಡೆದುಕೊಂಡು ಸುಮ್ಮನಾಗಿತ್ತು. ಸಮಯವಲ್ಲದ ಸಮಯದಲ್ಲಿ ಬಯಸದೇ ಬಂದ ಈ ನಿದ್ದೆಯನ್ನ ಶಪಿಸುತ್ತಾ ನೋಡಿದರೆ ಸೂರಜನ ಕರೆಗಳ ಪಟ್ಟಿಯೇ ಅಲ್ಲಿತ್ತು. ಯಾಕೆ ಫೋನ್ ಎತ್ತುತ್ತಿಲ್ಲವೆಂಬ ಆತಂಕದಿಂದ ನಾಲ್ಕು ಮೆಸೇಜುಗಳನ್ನೂ ಮಾಡಿದ್ದು ನೋಡಿ ತನ್ನನ್ನಾವರಿಸಿದ್ದ ನಿದ್ದೆಗೆ ಮನಸಾರೆ ಬೈದುಕೊಂಡಳು. ಅವನಿಗೆ ಕಾಲ್ ಮಾಡಿ ತಾನು ಮೈ ಮರೆತು ಮಲಗಿದ್ದನ್ನು ತಿಳಿಸಿದವಳ ಧ್ವನಿಯಲ್ಲಿ ಬಾಯಿಬಿಟ್ಟು ಹೇಳದ ಸಾರಿಯೊಂದು ಇತ್ತು. ಅದನ್ನು ಅರಿತ ಸೂರಜ್, "ನೀನು ನಿದ್ದೆ ಮಾಡಿದ್ದೆ ಎಂದರೆ ನನಗೆ ಸಂತೋಷವೇ ಪ್ರಣತಿ ಮರೀ, ಈ ನಡುವೆ ನೀನು ಸುಮಾರು ಹೊತ್ತು ಎಚ್ಚರವಾಗಿಯೇ ಇರುತ್ತಿದ್ದೆಯಲ್ಲ. ಇನ್ನು ಮೇಲೆ ಹೀಗೆ ನಿದ್ದೆ ಬಂದಾಗ ಮಲಗಿಬಿಡು. ಅದಕ್ಕೆಲ್ಲ ಟೈಮ್ ನೋಡುವ ಅವಶ್ಯಕತೆಯಿಲ್ಲ. ಯಾಕೋ ಫೋನ್ ಎತ್ತಲಿಲ್ಲವೆಂದು ಆತಂಕವಾಯಿತಷ್ಟೆ. ಇರಲಿ, ನಾನು ಆರಾಮವಾಗಿ ಸ್ಲೀಪರ್ ಕೋಚಿನಲ್ಲಿ ಹೊರಟಿದ್ದೇನೆ. ನಾಳೆ ತಲುಪಿದ ಮೇಲೆ ಫೋನ್ ಮಾಡುತ್ತೇನೆ ಮಲಗು" ಎಂದು ಫೋನಿಟ್ಟ. ಅವನ ಧ್ವನಿಯಲ್ಲಿನ ಪ್ರೀತಿ, ಕಾಳಜಿಗೆ ಸೋತ ಪ್ರಣತಿಯ ನಿದ್ದೆ ಹಾರಿಹೋಗಿತ್ತು. ಊಟ ಮುಗಿಸಿ ಸ್ವಲ್ಪ ಟೀವಿ ನೋಡೋಣ ಎಂದುಕೊಂಡು ಎದ್ದವಳಿಗೆ ಕೂಡಲೆ ಯಾಕೋ ಒಬ್ಬಳೇ ಊಟ ಮಾಡುವುದು ಬೇಜಾರೆನಿಸಿ ಮತ್ತೆ ಸೋಮಾರಿತನದಿಂದ ಹಾಗೇ ಉರುಳಿಕೊಂಡಳು. ಕೈ ಯಾಂತ್ರಿಕವಾಗಿ ಮೊಬೈಲ್ ಎತ್ತಿ ಮೆಸೆಂಜರ್ ತೆರೆಯಿತು. ಗೆಳತಿ ರಜನಿ ಹೇಗಿದ್ದಿ ಎಂದು ಕಳಿಸಿದ ಮೆಸೇಜಿಗೆ ಉತ್ತರಿಸುತ್ತಿದ್ದಂತೆ, "ಹೆಲ್ಲೋ, ಐ ಹೋಪ್ ಐ ಯಾಮ್ ನಾಟ್ ಡಿಸ್ಟರ್ಬಿಂಗ್ ಯು ಇನ್ ಆಡ್ ಅವರ್?" ಎನ್ನುವ ವಿಕ್ರಮನ ಮೆಸೇಜು ಪುರ್ರನೆ ಹಾರಿ ಬಂದಿತು. ನೋಡಿಯೂ ನೋಡದವಳಂತೆ ತನ್ನಷ್ಟಕ್ಕೆ ತಾನು ರಜನಿಯೊಂದಿಗೆ ಚಾಟ್ ಮುಂದುವರೆಸಿದಳು. "ಏನ್ರೀ ನೀವು